**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.462/2024**

| | | |
|---|---|---|
| ಸಾಕ್ಷಿದಾರರ ಹೆಸರು | : ರೇಣುಕಾ ಡಿ.ವಿ | ಪ್ರಾಸಾ-14 |
| ಗಂಡನ ಹೆಸರು | : ಜಗದೀಶ್ ಎಸ್.ಜಿ | ಚಾಸಾ-26 |
| ವಯಸ್ಸು | : 49 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ | ದಿನಾಂಕಃ 17.02.2026. |
| ವಾಸಸ್ಥಳ | : ಬಣಕಲ್ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ನವೆಂಬರ್ 2023 ರಿಂದ ಜನವರಿ 2024 ರವರೆಗೂ ಮತ್ತು ಜೂನ್ 2024 ರಿಂದ ಇಲ್ಲಿಯವರೆಗೂ ಬಣಕಲ್ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.23.11.2023 ರಂದು ಪ್ರಕರಣಕಕ್ಕೆ ಸಂಬಂಧಿಸಿದ ಸ್ಕೂಟಿ ವಾಹನ ಸಂಖ್ಯೆ KA-18-EK-1536 ರ ಬಿ Extract ವರದಿಯನ್ನು ನೀಡುವಂತೆ RTO, ಚಿಕ್ಕಮಗಳೂರು ರವರಿಗೆ ಮನವಿಯನ್ನು ನೀಡಿರುತ್ತೇನೆ. ದಿ.13.12.2023 ರಂದು ಚಾಸಾ-14 ರವರಿಗೆ ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿರುತ್ತೇನೆ. ದಿ.17.12.2023 ರಂದು ಚಾಸಾ-15 ರವರಿಗೆ ಪಿರ್ಯಾದಿಯು ನಿರ್ವಹಿಸಿದ ಕರ್ತವ್ಯದ ಬಗ್ಗೆ ದಾಖಲಾತಿಗಳನ್ನು ನೀಡುವಂತೆ ಮನವಿ ಮಾಡಿಕೊಂಡಿರುತ್ತೇನೆ. ದಿ.20.01.2024 ರಂದು ಆರೋಪಿಯ ಬಗ್ಗೆ ಖಚಿತ ಮಾಹಿತಿಯನ್ನು ಪಡೆದುಕೊಂಡು, ಠಾಣಾ ಸಿಬ್ಬಂದಿಯವರಾದ ಚಾಸಾ-22 ರಿಂದ 24 ರವರೊಟ್ಟಿಗೆ ಇಲಾಖಾ ವಾಹನದಲ್ಲಿ ಠಾಣೆಯಿಂದ ಮ.1.00 ರ ಸಮಯಕ್ಕೆ ಹೊರಟು, ಸಮಾರು ಮ.3.00 ರ ಸಮಯದಲ್ಲಿ ಸಬ್ಬೇನಹಳ್ಳಿಯ ಬಳಿ ಕಾಯುತ್ತಿರುವಾಗ ಆರೋಪಿಯು KA-18-EK-1536 ರ ನೋಂದಣೀ ಸಂಖ್ಯೆಯ ಸ್ಕೂಟಿಯಲ್ಲಿ ಬರುತ್ತಿರುವಾಗ, ಸ್ಕೂಟಿಯನ್ನು ನಿಲ್ಲಿಸಿ, ಆರೋಪಿಯ ಹೆಸರು, ವಿಳಾಸ ಕೇಳಲಾಗಿ, ಚಂದು ಎ.ಎನ್ ಬಿನ್ ನಾಗರಾಜಪ್ಪ, ವಾಸ ಹಳಪೆ, ಕೆಂಬಾರ ರಸ್ತೆ, ಪಂಪ್ ವೆಲ್ ಮಂಗಳೂರು, ಸ್ವಂತ ವಿಳಾಸ ಬಾಗಶೆಟ್ಟಿ ಹಳ್ಳಿ ಗ್ರಾಮ, ಚೌಳಹಿರಿಯೂರು ಹೋಬಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಎಂದು ತಿಳಿದು ಬಂದಿರುತ್ತದೆ.

ಆರೋಪಿಯ ವಿವರವನ್ನು ಖಚಿತಪಡಿಸಿಕೊಂಡು ವಿಚಾರಣೆಯ ನಿಮಿತ್ತ ವಶಕ್ಕೆ ಪಡೆದು, ಬಣಕಲ್ ಪೋಲಿಸ್ ಠಾಣೆಗೆ ಕರೆದುಕೊಂಡು ಬಂದು ಪ್ರಾಥಮಿಕ ವಿಚಾರಣೆ ಮಾಡಿ ಮ.3.30 ರ ಸಮಯಕ್ಕೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ನಿಭಂದನೆಗಳನ್ನು ಪಾಲನೆ ಮಾಡಿ, ಆರೋಪಿಗೆ ದಸ್ತಗಿರಿ ಕ್ರಮವನ್ನು ಜರುಗಿಸಿರುತ್ತೇನೆ. ನಂತರ ಆರೋಪಿಯ ಕೂಲಂಕುಶ ವಿಚಾರವನ್ನು ಪಡೆದು, ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಆರೋಪಿಯು ಘಟನೆ ನಡೆದ ದಿನ ತಾನು ಉಪಯೋಗಿಸಿದ ಸ್ಕೂಟಿ ಹಾಗೂ ಹೆಲ್ಮೆಟ್ ನ್ನು ತೋರಿಸಿ, ಹಾಜರುಪಡಿಸುವುದಾಗಿ ತಿಳಿಸಿದ ಮೇರೆಗೆ, ಚಾಸಾ-9 ಮತ್ತು 10 ರವರನ್ನು ಠಾಣೆಗೆ ಬರಮಾಡಿಕೊಂಡು ಸದರಿಯವರಿಗೆ ನೋಟೀಸನ್ನು ಜಾರಿ ಮಾಡಿ ಸ.4.15 ರಿಂದ 5.30 ರವರೆಗೆ ಆರೋಪಿಯು ತೋರಿಸಿ, ಹಾಜರುಪಡಿಸಿದ ವಾಹನ ಹಾಗೂ ಹೆಲ್ಮೆಟ್ ನ ಮಹಜರ್ ಕ್ರಮ ಜರುಗಿಸಿ,

ಅಮಾನತುಪಡಿಸಿಕೊಂಡಿರುತ್ತೇನೆ. ಅಮಾನತುಪಡಿಸಿಕೊಂಡು ವಾಹನ ಮತ್ತು ಹೆಲ್ಮೆಟ್ ನ್ನು ಮಾಲುಪಟ್ಟಿ ಸಂ.5/2024 ರಂತೆ ನೊಂದಾಯಿಸಿ, ನ್ಯಾಯಾಲಯದಿಂದ ಪೂರ್ವಾನುಮತಿ ಪಡೆದು ಠಾಣೆಯಲ್ಲಿ ಇರಿಸಿರುತ್ತೇನೆ.

ನಂತರ ಆರೋಪಿಯು ಮುಂದಿನ ತನಿಖೆಗೆ ಅಗತ್ಯವಿಲ್ಲದ ಕಾರಣ ಅವರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿ, ಚಾಸಾ-16 ಮತ್ತು 17 ರವರ ಬೆಂಗಾವಲಿನಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಹಾಗೂ ನ್ಯಾಯಾಲಯದ ಆದೇಶದಂತೆ ಅಮಾನತುಪಡಿಸಿಕೊಂಡಿದ್ದ ಸ್ಕೂಟಿಯನ್ನು ದಿ.04.02.2024 ರಂದು ಚಾಸಾ-11 ಮತ್ತು 12 ರವರ ಸಮಕ್ಷಮ ಸ.6.00 ರಿಂದ 7.00 ರವರೆಗು ಮಹಜರ್ ಕ್ರಮವನ್ನು ಜರುಗಿಸಿ, ಆರೋಪಿಗೆ ಬಿಟ್ಟುಕೊಟ್ಟಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಯ ಸಂಬಂಧ ಚಾಸಾ-27 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ದಿ.03.02.2024 ರಂದು ಮತ್ತು ದಿ.17.12.2023 ರಂದು ಚಾಸಾ-15 ರವರಿಗೆ ಬರೆದ ಮನವಿ ಪತ್ರ ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿ ಪತ್ರವನ್ನು ನಿಪಿ-13 ಮತ್ತು 14 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-13(ಎ) ಮತ್ತು 14(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.20.01.2024 ರಂದು ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುವ ಬಗ್ಗೆ ನೋಡಿ ಗುರುತಿಸಿದ್ದು, ಸದರಿ ಸ್ವ ಇಚ್ಛಾ ಹೇಳಿಕೆಯನ್ನು ನಿಪಿ-15 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ದಿ.23.11.2023 ರಂದು ಚಿಕ್ಕಮಗಳೂರಿನ RTO ರವರಿಗೆ ಬರೆದ ಮನವಿ ಪತ್ರ ಮತ್ತು ಅದರಲ್ಲಿ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿ ಪತ್ರವನ್ನು ನಿಪಿ-16 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-9 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.04.02.2024 ರಂದು ಸ್ವತ್ತನ್ನು ಬಿಡುಗಡೆ ಮಾಡಿರುವ ಮಹಜರ್ ವರದಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ವರದಿಯನುಖ ನಿಪಿ-17 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.04.02.2024 ರಂದು ಸ್ವತ್ತನ್ನು ಬಿಡುಗಡೆ ಮಾಡುವ ಸಮಯದಲ್ಲಿ ತೆಗೆದ ಒಂದು ಫೋಟೋವನ್ನು ನೋಡಿ ಗುರುತಿಸಿದ್ದು, ಸದರಿ ಫೋಟೋವನ್ನು ನಿಪಿ-18 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಎಂ.ಒ.2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-10 ರಲ್ಲಿ ಕಂಡುಬರುವ ಸ್ಕೂಟಿಯನ್ನು ತಾವು ಬಿಡುಗಡೆ ಮಾಡಿರುವುದಾಗಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಎಸ್.ಆರ್. ವಕೀಲರಿಂದಃ**

ಆರೋಪಿಯು ದಸ್ತಗಿರಿ ಮಾಡಿದ ದಿನ ಸದರಿಯವರು ಆ ದಿನ ಮೂಡಿಗೆರೆಯಿಂದ ಮಂಗಳೂರು ಮಾರ್ಗವಾಗಿ ಬರುತ್ತಿದ್ದಾರೆ ಎಂಬ ಮಾಹಿತಿ ಇತ್ತು. ಮ.12.00 ರಿಂದ 12.45 ರ ಸಮಯದಲ್ಲಿ ನಮಗೆ ಸದರಿ ಮಾಹಿತಿಯು ಬಂದಿರುತ್ತದೆ. ನಾನು ಠಾಣೆಯಲ್ಲಿರುವಾಗ ಸದರಿ

ಮಾಹಿತಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ಠಾಣೆಯಿಂದ ದಸ್ತಗಿರಿ ಮಾಡಿದ ಸ್ಥಳವಾದ ಸಬ್ಬೇನಹಳ್ಳಿಯು 7 ರಿಂದ 8 ಕೀ.ಮೀ ಅಂತರದಲ್ಲಿರುತ್ತದೆ. ಬಣಕಲ್ ನಿಂದ ಮೂಡಿಗೆರೆಯು 15 ಕೀ.ಮೀ. ಅಂತರದಲ್ಲಿರುತ್ತದೆ. ವಶಪಡಿಸಿಕೊಂಡ ವಾಹನದ ದಾಖಲಾತಿಯ ಮೇರೆಗೆ ಆರೋಪಿಯ ಬಗ್ಗೆ ನಮಗೆ ಮಾಹಿತಿಯು ತಿಳಿದು ಬಂದಿರುತ್ತದೆ. ದಸ್ತಗಿರಿ ಮಾಡಿದ ಸಮಯದಲ್ಲಿ ಆರೋಪಿಯ ವಯಕ್ತಿಕ ದಾಖಲಾತಿಗಳನ್ನು ಪರೀಕ್ಷಿಸಿರುತ್ತೇವೆ. ಸದರಿ ದಾಖಲಾತಿಯನ್ನು ಅಂತಿಮ ವರದಿಯೊಟ್ಟಿಗೆ ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಆರೋಪಿಯನ್ನು ದಸ್ತಗಿರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿಯನ್ನು ಮಾಡಿದ ನಂತರ ದಸ್ತಗಿರಿ ಕ್ರಮವನ್ನು ಜರುಗಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಗೆ ಸಂಬಂಧಪಟ್ಟ ವಾಹನದ ಅಮಾನತನು ಮಹಜರ್ ಮುಖಾಂತರ ಜರುಗಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅದಕ್ಕೆ ಸಂಬಂಧಿಸಿದಂತೆ ಮಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿರುತ್ತೇಲನ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಮಾನತ್ ಮಹಜರ್ ನ ಸಾಕ್ಷಿದಾರರುಗಳು ನಮ್ಮ ಠಾಣೆಯ ಹಲವು ಪ್ರಕರಣಗಳಲ್ಲಿ ಮಹಜರ್ ಸಾಕ್ಷಿದಾರರಾಗಿ ಹಾಜರಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿದಾರರ ಸಮಕ್ಷಮ ಆರೋಪಿಗೆ ಸಂಬಂಧಿಸಿದ ಸ್ಕೂಟಿ ಮತ್ತು ಹೆಲ್ಮೆಟ್ ನ್ನು ವಶಕ್ಕೆ ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ತನಿಖೆಯನ್ನು ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.